ಎಪ್ರೀಲ್ 1 ರಿಂದ ಅಬ್ಬಿಗೇರಿ ಗ್ರಾಮದಲ್ಲಿ ಸಮುದಾಯ ಕಾಮಗಾರಿ ಆರಂಭಿಸಿ : ರಿಯಾಜ ಖತೀಬ್

# ತಾಲೂಕಿನಲ್ಲಿ ನರೇಗಾ ಯೋಜನೆಯಡಿ ಅತಿ ಹೆಚ್ಚು ಮಾನವ ದಿನಗಳನ್ನು ಸೃಜನೆ ಮಾಡುವ ಗ್ರಾಮ ಅಬ್ಬಿಗೇರಿ



ಗದಗ : ರೋಣ ತಾಲೂಕಿನಲ್ಲಿ ಅತಿ ಹೆಚ್ಚು ಮಾನವ ದಿನಗಳ ಸೃಜನೆ ಮಾಡುವ ಪಂಚಾಯತಿಯಲ್ಲಿ ಅಬ್ಬಿಗೇರಿ ಮೊದಲನೇ ಸ್ಥಾನದಲ್ಲಿದೆ. ಹಿಂದಿನ ವರ್ಷದಂತೆ ಈ ಬಾರಿಯೂ 2024-25 ನೇ ಸಾಲಿನಲ್ಲಿ ಎಪ್ರಿಲ್ 1 ನೇ ವಾರದಿಂದ ಸಮುದಾಯ ಕಾಮಗಾರಿ ಆರಂಭವಾಗುತ್ತಿದ್ದು, ದುಡಿಯುವ ಕೈಗಳಿಗೆ ಉದ್ಯೋಗ ನೀಡುವ ಮೂಲಕ ಗ್ರಾಮೀಣ ಜನರ ಜೀವನಮಟ್ಟ ಸುಧಾರಿಸುವ ಜೊತೆಗೆ ಗುಣಮಟ್ಟದ ಕೆಲಸ ನಿರ್ವಹಿಸುವಂತೆ ರೋಣ ತಾಲೂಕ ಪಂಚಾಯತಿ ಸಹಾಯಕ ನಿರ್ದೇಶಕ (ಗ್ರಾ. ಉ) ರಿಯಾಜ ಖತೀಬ್ ಹೇಳಿದರು.

ಅಬ್ಬಿಗೇರಿ ಗ್ರಾಮ ಪಂಚಾಯತಿಯಲ್ಲಿ ಸೋಮವಾರ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪೂರ್ವ ಭಾವಿಯಾಗಿ ಕಾಯಕ ಬಂಧುಗಳ ಸಭೆಯನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಎಪ್ರಿಲ್‌ನಲ್ಲಿ ಅಬ್ಬಿಗೇರಿ ಗ್ರಾಮದಲ್ಲಿ ಕೂಲಿಕಾರರ ಬೇಡಿಕೆ ಆಧರಿಸಿ ನಮೂನೆ -6 ಪಡೆಯುವ ಮೂಲಕ ಉದ್ಯೋಗ ಪ್ರಾರಂಬಿಸಲಿದ್ದು, ಕಾಯಕ ಬಂದುಗಳಾದ ತಾವುಗಳು ತಮ್ಮ ಕೂಲಿಕಾರರ ಆಧಾರ್ ಸಂಖ್ಯೆಗೆ ಬ್ಯಾಂಕ್ ಖಾತೆ ಸಂಖ್ಯೆ ಲಿಂಕ್ ಹಾಗೂ ಉದ್ಯೋಗ ಚೀಟಿ ಎನ್.ಸಿ.ಪಿ.ಐ ಲಿಂಕ್ ಕಡ್ಡಾಯವಾಗಿ ಮಾಡಿಸಬೇಕಾಗುತ್ತದೆ. ಇಲ್ಲದೇ ಹೋದಲ್ಲಿ ಹಣ ಜಮಾ ಆಗುವುದಿಲ್ಲ ಅದಕ್ಕೆ ಕೆಲಸ ಮಾಡಿದ ಕೂಲಿಕಾರಿಗೆ ಅನ್ಯಾಯ ವಾಗುತ್ತದೆ ಈ ಹಿನ್ನೆಲೆ ತಮ್ಮೆಲ್ಲರ ಸಹಕಾರ ಅಗತ್ಯ ಎಂದರು.

ಇನ್ನು ಕೆಲಸದ ಸ್ಥಳಗಳಲ್ಲಿ ಕೂಲಿಕಾರರಿಗೆ ಪ್ರಥಮ ಚಿಕಿತ್ಸೆ, ನೆರಳು, ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಆರು ತಿಂಗಳಿಂದ ಮೂರು ವರ್ಷದ ಮಕ್ಕಳಿಗೆ ಗ್ರಾಮ ಪಂಚಾಯತಿಯಿಂದ ಕೂಸಿನ ಮನೆ ಆರಂಭವಮಾಡಿದ್ದು, ತಾವುಗಳು ತಮ್ಮ ಮಕ್ಕಳನ್ನು ಅಲ್ಲಿಯೇ ಬಿಟ್ಟಿಹೋಗಬೇಕು ಅಂತಾ ತಿಳಿಸಿದರು. ಮತ್ತು ಈ ವಿಷಯವಾಗಿ ವ್ಯಾಪಕ ಪ್ರಚಾರ ಮಾಡಲು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಲೋಹಿತ .ಎಮ್. ಮಾತನಾಡಿ ಕೆಲಸದ ಸ್ಥಳದಲ್ಲಿ ಕೂಲಿಕಾರರ ಹಾಜರಾತಿಯನ್ನು ಎರಡು ಹಂತದಲ್ಲಿ ಎನ್.ಎಂ.ಎಂ.ಎಸ್ ಆ?ಯಪ್ ನಲ್ಲಿ ತಾವುಗಳು ಸೆರೆ ಹಿಡಿಯಬೇಕು, ಕೂಲಿಕಾರರಿಗೆ ಯಾವುದೇ ತೋಂದರೆಯಾಗದಂತೆ ನೋಡಿಕೊಳ್ಳಬೇಕು. ಎಬಿಪಿಎಸ್ ಆಗದೇ ಇರುವ ಕೂಲಿಕಾರರು ಕೂಡಲೇ ಎಬಿಪಿಎಸ್ ಮತ್ತು ಎನ್.ಸಿ.ಪಿ.ಐ ಲಿಂಕ್ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿ.ಎಫ್.ಟಿ ,ಜಿ.ಕೆ.ಎಂ ಮತ್ತು ಕಾಯಕ ಬಂಧುಗಳು ಮತ್ತು ಪಂಚಾಯತ ಸಿಬ್ಬಂದಿ ಹಾಜರಿದ್ದರು.

# ನವೀಕರಿಸಿದ ಅತ್ಯಾಧುನಿಕ ಡಾ.ಬಿ.ಎಸ್.ಜೀರಗೆ ಸಭಾಂಗಣ ಉದ್ಘಾಟನೆ ಡಾ.ಪ್ರಭಾಕರ ಕೋರೆ ಹರ್ಷ



ಬೆಳಗಾವಿ : ಬೆಳಗಾವಿಯ ಸಾಂಸ್ಕೃತಿಕ ಲೋಕಕ್ಕೆ ಮುಕುಟಮಣಿ ಎಂಬಂತೆ ಅತ್ಯಾಧುನಕ ಸಾಂಸ್ಕೃತಿಕ ಸಭಾಂಗಣವನ್ನು ನೀಡಿದ ಕೊಡುಗೆ ಕೆಎಲ್‌ಇ ಸಂಸ್ಥೆಗೆ ಸಲ್ಲುತ್ತದೆ. 1982ರಲ್ಲಿ ಅಲ್ಪ ಪ್ರಮಾಣದಲ್ಲಿ ನಿರ್ಮಾಣಗೊಂಡಿದ್ದ ಜವಾಹರಲಾಲ ನೆಹರು ವೈದ್ಯಕೀಯ ಕಾಲೇಜಿನ ಡಾ.ಬಿ.ಎಸ್.ಜೀರಗೆಸಭಾಂಗಣವನ್ನು ಕಾಲಕಾಲಕ್ಕೆ ಅತ್ಯಾಧುನಕ ತಂತ್ರಜ್ಞಾನದೊಂದಿಗೆ ನವೀಕರಗೊಳಿಸಲಾಗಿದೆ. ಅನೇಕ ಐತಿಹಾಸಿಕ ಸಾಂಸ್ಕೃತಿಕ ಸಮಾರಂಭಗಳಿಗೆ ವೇದಿಕೆಯಾಗಿರುವುದು ಅಭಿಮಾನದ ಸಂಗತಿ ಎಂದು ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ.ಪ್ರಭಾಕರ ಕೋರೆ ಅವರಿಂದಿಲ್ಲಿ ಹೇಳಿದರು.

ನವೀಕರಣಗೊಂಡ ಅತ್ಯಾಧುನಕ ತಂತ್ರಜ್ಞಾನಗಳನ್ನೊಳಗೊಂಡ 1200 ಆಸನಗಳ ಸಾಮರ್ಥ್ಯದ ಬಿ ಎಸ್ ಜೀರಗೆ ಸಭಾಂಗಣವನ್ನು ಜನಸೇವೆಗೆ ಶ್ರೀಮತಿ ಆಶಾ ಕೋರೆಯವರೊಂದಿಗೆ ಅರ್ಪಿಸಿ ಮಾತನಾಡಿದ,ಅವರು ನವೀಕರಿಸಿದ ಸಭಾಂಗಣವು ಅತ್ಯಾಧುನಕ ಸೌಲಭ್ಯಗಳನ್ನು ಹೊಂದಿದೆ ಆಡಿಟೋರಿಯಂನಾದ್ಯಂತ ಅಲ್ಟ್ರಾ ಸೌಂಡ್‌ನ್ನು ಸಮವಾಗಿ ವಿತರಿಸಲಾಗಿದ್ದು, ಎಲ್ಲಿಯೂ ಧ್ವನಿ ವ್ಯತ್ಯಾಸವೆನಿಸಲಾರದು. ಸಂಪೂರ್ಣವಾಗಿ ಸಭಾಂಗಣವು ಹವಾನಿಯಂತ್ರಿತವಾಗಿದೆ. ಐಇಆ ಪರದೆಯೊಂದಿಗೆ ಅತ್ಯಾಧುನಿಕ ಮತ್ತು ಅತ್ಯುನ್ನತ ಬೆಳಕಿನ ವ್ಯವಸ್ಥೆಗಳೊಂದಿಗೆ ಸಂಪೂರ್ಣವಾಗಿ ಮೇಲ್ದರ್ಜೆಗೆ ಉನ್ನತೀಕರಿಸಲಾಗಿದೆ ಎಂದು ವಿವರಿಸಿದರು.

ಹುಬ್ಬಳ್ಳಿಯಲ್ಲಿಯೂ ಕೂಡ ಸುಸಜ್ಜಿತ ಹಾಗೂ ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ 1000 ಹಾಸಿಗೆಗಳ ಆಸ್ಪತ್ರೆ ಹಾಗೂ ಮಹಾವಿದ್ಯಾಲಯ ನಿರ್ಮಾಣಗೊಳ್ಳುತ್ತಿದೆ. ಅಂತರಾಷ್ಟ್ರೀಯ ಮಟ್ಟದ ಬೋಧನಾ ಕೋಠಡಿ ಸೇರಿದಂತೆ ಎಲ್ಲ ವಿಭಾಗಗಳನ್ನು ಅತ್ಯಾಧುನೀಕರಣಗೊಳಿಸಲಾಗಿದೆ. ಈಗಾಗಲೇ ಎಲ್ಲ ಕಾಮಗಾರಿಗಳು ಮುಗಿದಿದ್ದು, ಯಂತ್ರೋಪಕರಣಗಳ ಅಳವಡಿಕೆ ಕಾರ್ಯ ಮುಗಿದಿದೆ.ಇನ್ನೆರಡು ತಿಂಗಳಲ್ಲಿ ಕ್ಯಾನ್ಸರ ಆಸ್ಪತ್ರೆ ಜನಸೇವೆಗೆ ಅರ್ಪಣೆ ಮಾಡಲಾಗುವದು ಎಂದು ಹೇಳಿದರು.

ಸಭಾಂಗಣದ ವೈಶಿಷ್ಟ್ಯತೆ :ದೊಡ್ಡ ಪೋಡಿಯಂ, ಅತಿಥಿಗಳಿಗಾಗಿ ವಿಶೇಳ ಕುರ್ಚಿಗಳೊಂದಿಗೆ ಸ್ನೇಹಶೀಲ ಆಸನಗಳು, ಈವೆಂಟ್‌ಗಳ ಸೂಕ್ಷ್ಮ ವೀಕ್ಷಣೆಗಾಗಿ ಬಾಲ್ಕನಿ ಆಸನಗಳು, ಐಅಆ ಪ್ರೊಜೆಕ್ಟರ್‌ಗಳು, ಪರದೆಗಳು ಮತ್ತು ಪರಿಸರಸ್ನೇಹಿ ಕೋಣೆಗಳೊಂದಿಗೆ ಉತ್ತಮವಾಗಿ ಸುಸಜ್ಜಿತಗೊಳಿಸಲಾಗಿದೆ. ಅಂತರಾಷ್ಟೀಯ ಮಟ್ಟದಲ್ಲಿ ರೂಪುಗೊಂಡಿರುವ ಡಾ.ಬಿ.ಎಸ್.ಜೀರಗೆ ಎಲ್ಲರ ಮನವನ್ನು ಸೂರೆಗೊಳ್ಳುವಂತಿದೆ. ಇಲ್ಲಿ ಕುಳಿತ ಸಮಾರಂಭಗಳನ್ನು ಸಹೃದಯರು ಪ್ರೀತಿಯಿಂದ ಆಸ್ವಾದಿಸಬಹುದು. ಅಂತೆಯೆ ಈ ಸಭಾಭವನದ ಮೇಲೆ 600 ಆಸನಗಳ ಡಾ.ಎಚ್.ಬಿ.ರಾಜಶೇಖರ ಹಾಲ್, 300 ಆಸನಗಳ ಡಾ. ಬಿ.ಎಸ್.ಕೊಡಕಣಿ ಹಾಲ್, 150 ಆಸನಗಳ ಡಾ.ವಿ.ಡಿ.ಪಾಟೀಲ ಹಾಲ್‌ಗಳು ಅತ್ಯಾಕರ್ಷಕವಾಗಿದ್ದು ಈಗಾಗಲೇ ಕಾರ್ಯಾರಂಭಮಾಡಿವೆ. ಬೆಳಗಾವಿಯ ಪರಿಸರದಲ್ಲಿ ಒಂದೇ ಸಭಾಂಗಣದ ಆವರಣದಲ್ಲಿ ನಾಲ್ಕು ಸುಸಜ್ಜಿತ ಸಾಂಸ್ಕೃತಿಕ ಭವನಗಳು ಒಂದೇ ಸೂರಿನಡಿ ರೂಪಗೊಂಡಿರುವುದು ಒಂದು ದಾಖಲೆಯೇ ಆಗಿದೆ. ಕೆಎಲ್‌ಇ ಸಂಸ್ಥೆ, ಕಾಹೆರ್‌ಗೆ ಸಂಬಂಧಿಸಿದ ಅನೇಕ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸಮಾರಂಭಗಳು, 70ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಶರಣ ಸಾಹಿತ್ಯ ಪರಿಳತ್ ಸಮಾರಂಭ, ಯುವಜನೋತ್ಸವ, ವಿಶ್ವ ಕನ್ನಡ ಸಮ್ಮೇಳನದಂತಹ ಅನೇಕ ಸಮಾರಂಭಗಳಿಗೂ ಈ ಸಭಾಂಗಣ ಸಾಕ್ಷಿಯಾಗಿರುವುದನ್ನು ಅವಲೋಕಿಸಬಹುದೆಂದು ಡಾ.ಕೋರೆಯವರು ಹೇಳಿದರು.ಈ ಸಂದರ್ಭದಲ್ಲಿ ಕಾಹೇರ್ ಕುಲಪತಿಗಳಾದ ಡಾ.ನೀತಿನ್ ಗಂಗಾನೆ, ಯುಎಸ್‌ಎಂ ಕೆಎಲ್‌ಇ ನಿರ್ದೇಶಕರಾದ ಡಾ. ಹೆಚ್ ಬಿ ರಾಜಶೇಖರ, ಕುಲಸಚಿವರಾದ ಡಾ.ಎಂ.ಎಸ್.ಗಣಾಚಾರಿ, ಕೆಎಲ್‌ಇ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು. ಡಾ.ಅವಿನಾಶ ಕವಿ ನಿರೂಪಿಸಿದರು.

ಡಿ.ಸಿ ಪಾವಟೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಸ್ವಾಗತ ಸಮಾರಂಭ

# ದೇಶದ ಭವಿಷ್ಯ ರೂಪಿಸುವ ಹೊಣೆಗಾರಿಕೆ ಶಿಕ್ಷಕರಿಗಿದೆ : ಎಸ್.ವ್ಹಿ ಸಂಕನೂರ



ಗದಗ : ಭಾರತೀಯ ಸಂಸ್ಕೃತಿಯಲ್ಲಿ ಶಿಕ್ಷಕ ಹುದ್ದೆಗೆ ಮಹತ್ವದ ಸ್ಥಾನವಿದ್ದು, ದೇಶದ ಭವಿಷ್ಯವನ್ನು ರೂಪಿಸುವ ಹೊಣೆಗಾರಿಕೆ ಶಿಕ್ಷಕರಿಗಿದೆ ಎಂದು ವಿಧಾನ ಪರಿಷತ್ ಸದಸ್ಯರಾದ ಎಸ್.ವ್ಹಿ ಸಂಕನೂರ ನುಡಿದರು. ಅವರು ಇತ್ತೀಚೆಗೆ ನಗರದ ತೋಂಟದಾರ್ಯ ವಿದ್ಯಾಪೀಠದ ಡಿ.ಸಿ ಪಾವಟೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಜರುಗಿದ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಸ್ವಾಗತ ಸಮಾರಂಭ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಯ ವ್ಯಕ್ತಿತ್ವ ನಾಲ್ಕು ಗೋಡೆಯ ಮಧ್ಯದ ವರ್ಗಕೋಣೆಯಲ್ಲಿ ನಿರ್ಮಾಣವಾಗುತ್ತದೆ, ಈ ಕೆಲಸ ಮಾಡಬೇಕಿರುವ ಶಿಕ್ಷಕರು ತಮ್ಮ ವಿಷಯಗಳ ಜೊತೆಗೆ ಮಕ್ಕಳಲ್ಲಿ ಜೀವನ ಮೌಲ್ಯಗಳನ್ನು ಬಿತ್ತಬೇಕೆಂದರು. ಕೇವಲ ಸಾಧಾರಣ ಶಿಕ್ಷಕರಾಗದೇ ಬೋಧನಾ ಕೌಶಲ್ಯಗಳನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಂಡು ಆದರ್ಶ ಶಿಕ್ಷಕರಾಗಲು ಪ್ರಶಿಕ್ಷಣಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಎಸ್.ಪಿ ಗೌಳಿ ಮಾತನಾಡಿ, ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಕೃಪಾಶೀರ್ವಾದದಿಂದ ಹಾಗೂ ಸಂಸ್ಥೆಯ ಕಾರ್ಯದರ್ಶಿಗಳಾದ ಎಸ್.ಎಸ್ ಪಟ್ಟಣಶೆಟ್ಟರ ಕರ್ತೃತ್ವಶಕ್ತಿಯಿಂದ ಆರಂಭವಾದ ಕಾಲೇಜು ಇದಾಗಿದ್ದು, ಪ್ರಶಿಕ್ಷಣಾರ್ಥಿಗಳು ಸಂಸ್ಥೆಯ ಪಾವಿತ್ರ್ಯತೆಗೆ ಹಾಗೂ ತಮ್ಮ ಚಾರಿತ್ರ್ಯಕ್ಕೆ ಧಕ್ಕೆ ಬಾರದಂತೆ ನಡೆದುಕೊಂಡು ಉತ್ತಮ ಶಿಕ್ಷಕರಾಗಿ ಹೊರಹೊಮ್ಮಿ ಎಂದು ಆಶಿಸಿದರು.

2023-24ನೇ ಸಾಲಿನ ವಿದ್ಯಾರ್ಥಿ ಒಕ್ಕೂಟಕ್ಕೆ ಆಯ್ಕೆಯಾದ ಪ್ರಶಿಕ್ಷಣಾರ್ಥಿಗಳಿಗೆ ಉಪನ್ಯಾಸಕ ಎಂ.ಎಂ ನದಾಫ ಪ್ರಮಾಣ ವಚನ ಬೋಧಿಸಿದರು.

ಎಂ.ಕೆ ಬಂಡಿಹಾಳ ಹಾಗೂ ಎಸ್.ಎಚ್ ರಾಮದುರ್ಗ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸವಿತಾ ಹಾಗೂ ಸಂಗಡಿಗರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಪ್ರಶಿಕ್ಷಣಾರ್ಥಿ ಹೇಮಾ ನೀಲಗುಂದ ಪ್ರಾಸ್ತಾವಿಕವಾಗಿ ಮಾತನಾಡಿದಳು. ಪ್ರತಿಭಾ ರಬಜ್ಜನವರ ಹಾಗೂ ಶಿಲ್ಪಾ ಕಡಿವಾಳ ನಿರೂಪಿಸಿದರು. ರಂಗಪ್ಪ ಉಡಚಂಚಿ ವಂದಿಸಿದರು.

ಉಪನ್ಯಾಸಕರಾದ ಡಾ.ಗಿರಿಜಾ ಹಸಬಿ, ಕಲಾವತಿ ಸಂಕನಗೌಡರ, ಎಂ.ವೈ ಸೈದಾಪೂರ, ಲತಾ ಹಂಡಿ ಸೇರಿದಂತೆ ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಲೋಕಸಭಾ ಚುನಾವಣೆ ಘೋಷಣೆ ಚೆಕ್‌ಪೋಸ್ಟ್‌ನಲ್ಲಿ ಬಿಗಿ ತಪಾಸಣೆ



ಯರಗಟ್ಟಿ : 2024ರ ಲೋಕ ಸಭಾ ಚುನಾವಣೆಗೆ ದಿನಾಂಕ ಘೋಷಣೆ ಆಗುತ್ತಿದ್ದಂತೆಯೇ ಯ ರಗಟ್ಟಿ ಪಟ್ಟಣದ ಚೆಕ್ ಪೋಸ್ಟ್ ಮುಖಾಂತರ ಹಾಯ್ದು ಹೋಗುವ ವಾಹನಗಳ ತಪಾ ಸಣೆಯನ್ನು ನಡೆಸಲಾಗುತ್ತಿದೆ. ಯರಗಟ್ಟಿ ಪಿಎಸ್‌ಐ ಆಯ್. ಎಂ. ಹಿರೇಗೌಡರ, ಹಾಗೂ ಕಂದಾಯ ಅಧಿಕಾರಿಗಳು, ಡಿವೈಎಸ್ಪಿ ಹಾಗೂ ಸಿಪಿಐ ಮಾರ್ಗದರ್ಶನದಲ್ಲಿ ಮುರಗೋಡ ಪೊಲೀಸರು ಹಾಗೂ ತಾಲೂಕಾಡಳಿತದಿಂದ ನಿಯೋಜಿಸಲಾದ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಯರಗಟ್ಟಿ ಚೆಕ್‌ಪೋಸ್ಟ್ ಮುಖಾಂತರ ತಾಲೂಕಿಗೆ ಪ್ರವೇಶವಾಗುವ ವಾಹನಗಳನ್ನು ಪರಿಶೀಲಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

# ತಾಲೂಕಾ ಮಟ್ಟದ ಮಹಿಳಾ ಕವಿಗೋಷ್ಠಿ



ಮೂಡಲಗಿ: ನಾಲ್ಕು ಗೋಡೆಗಳ ಮಧ್ಯೆದಲ್ಲಿದ್ದ ಮಹಿಳೆಯ ಜೀವನವನ್ನು ಬಸವಣ್ಣ, ಜ್ಯೋತಿಬಾಪುಲೆ , ರಾಜಾರಾಮ ಮೋಹನರಾಯ, ಡಾ.ಅಂಬೇಡ್ಕರಂತಹ ಸಮಾಜ ಸುಧಾರಕರು ಮಹಿಳಾ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಹಿಳೆಗೆ ಸಮಾನತೆ ತರವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಎಲ್ಲಾ ಮಹಿಳೆಯರು ಜಾಗೃತಗೋಳಿಸಿ ಸಮಾಜದ ಎಲ್ಲ ರಂಗಗಳಲ್ಲಿ ಅವಕಾಶ ನೀಡಿ ಮಹಿಳೆ ಅಬಲೆಯಲ್ಲ ಸಬಲೆ ಎನ್ನುವುದನ್ನು ನಿರೂಪಿಸಬೇಕಾಗಿದೆ ಎಂದು ಸಾಹಿತಿ ವಿದ್ಯಾವತಿ ರಡ್ಡಿ ಹೇಳಿದರು.

ಅವರು ಪಟ್ಟಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮೂಡಲಗಿ ತಾಲೂಕಾ ಘಟಕ ಸಹಯೋಗದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಶ್ರೀ ರಂಗ ಸಾಂಸ್ಕೃತಿಕ ಭವನದಲ್ಲಿ ಜರುಗಿದ ತಾಲೂಕಾ ಮಟ್ಟದ ಮಹಿಳಾ ಕವಿಗೋಷ್ಠಿ, ವಚನಗಾಯನ ಹಾಗೂ ಭಾವಗೀತೆಗಳ ಗಾಯನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಉಪನ್ಯಾಸಕಿ ಗೀತಾ ಹಿರೇಮಠ ಮಾತನಾಡಿ, ಬದುಕಿನಲ್ಲಿ ಸಮಾಣತೆಯನ್ನು ನಾವೇ ಪಡೆದುಕೊಳ್ಳಬೇಕು, ಮಹಿಳೆಯರಿಗೆ ಬದುಕು ಮತ್ತು ಸಾಹಿತ್ಯ ಎರಡೂ ಅತ್ಯವಶ್ಯಕ, ಅಡುಗೆ ಮನೆಯಿಂದ ಅಂತರಿಕ್ಷೆವರಿಗೆ ಮಹಿಳೆ ಸಾಧನೆಯನ್ನು ನಾವು ಕಾಣಬಹುದು ಎಂದರು. ವೇದಿಕೆಯಲ್ಲಿ ಅತಿಥಿ ಮಂಗಲಾ ಗೊರಗುದ್ದಿ ಇದ್ದರು. ಸುಮಾರು 40ಕ್ಕೂ ಹೆಚ್ಚು ಮಹಿಳೆಯರು ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮ ಮೂಡಲಗಿ ತಾಲೂಕಾ ಕಸಾಪ ಅಧ್ಯಕ್ಷ ಡಾ.ಸಂಜಯ ಶಿಂಧಿಹಟ್ಟಿ, ಗೌರವಾಧ್ಯಕ್ಷ ಬಿ.ವಾಯ್ ಶಿವಾಪೂರ, ಎ.ಎಚ್.ಒಂಟಗೋಡಿ, ಬಿ.ಆರ್.ತರಕಾರ, ಸುರೇಶ ಲಂಕೆಪ್ಪಣವರ, ಡಾ.ಸಚೀನ ಟಿ ಮತ್ತಿತರರು ಇದ್ದರು. ಶಾಂತಾ ಜಂಬಗಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಮಂಜುಳಾ ಸವಸುದ್ದಿ ಸ್ವಾಗತಿಸಿದರು, ಅರ್ಪಿತಾ ಮುಳವಾಡ ನಿರೂಪಿಸದರು, ಶಶಿರೇಖಾ ಬೆಳಕ್ಕಿ ವಂದಿಸಿದರು.

# ಭಯ ಮುಕ್ತರಾಗಿ ಪರೀಕ್ಷೆ ಎದುರಿಸಿ : ರಾಮಚಂದ್ರಗೌಡ ಬಿ



ಅಳವಂಡಿ: ವಿಧ್ಯಾರ್ಥಿಗಳು ಸಮೀಪಿಸುತ್ತಿರುವ ಎಸ್ ಎಸ್ ಎಲ್ ಸಿ ಪರೀಕ್ಷೆಯನ್ನು ಧೈರ್ಯದಿಂದ ಎದುರಿಸಿ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ರಾಮಚಂದ್ರಗೌಡ ಬಿ ಗೊಂಡಬಾಳ ಅವರು ಕಿವಿ ಮಾತು ಹೇಳಿದರು.

ಅವರು ಸಮೀಪದ ನೀರಲಗಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು, ಹೋಬಳಿ ಘಟಕದ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿಕೊಂಡು ಮಾತನಾಡುತ್ತಾ ಪರೀಕ್ಷೆಗಳನ್ನು ಲಘುವಾಗಿ ಪರಿಗಣಿಸಬಾರದು ಹಾಗಂತ ಭಯ, ಭೀತಿಯಿಂದ ಎದುರಿಸದೇ ಭಯ ಮುಕ್ತರಾಗಿ ಎದುರಿಸಲು ಸಲಹೆ ನೀಡಿದರು. ಪರೀಕ್ಷಾ ಭಯ ನಿವಾರಣೆ ಕುರಿತು ಉಪನ್ಯಾಸ ನೀಡಿದ ರವಿಕುಮಾರ್ ಸಿ ಅವರು ಹಲವಾರು ಉದಾಹರಣೆಗಳನ್ನು ಕೊಡುತ್ತಲೇ ಮಕ್ಕಳು ಪರೀಕ್ಷೆ ಬರೆಯುವ ಕಲೆ ತಿಳಿಸಿಕೊಟ್ಟರು.

ನೀಲಪ್ಪ ಹಕ್ಕಂಡಿ ಅವರು ಹಾಸ್ಯ ಮಾಡುತ್ತಲೇ ಮಕ್ಕಳಿಗೆ ಪರೀಕ್ಷೆ ಬರೆಯುವ ಧೈರ್ಯ ತುಂಬಿದರು. ಉದ್ಘಾಟನೆ ನೆರವೇರಿಸಿ ಮಾತನಾಡಿದ ಮಲ್ಲಪ್ಪ ಜುಮ್ಮಣ್ಣನವರ ಅವರು ಕನ್ನಡ ಸಾಹಿತ್ಯ ಪರಿಷತ್ತು ಈ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಭೀಮನಗೌಡ್ರು, ನಾಗರಾಜ ಗಾಳಿ, ಹೋಬಳಿ ಘಟಕದ ಅಧ್ಯಕ್ಷ ಸುರೇಶ್ ಸಂಗರಡ್ಡಿ, ಗೀತಾ ಡೊಳ್ಳಿನ, ಇತರರು ಉಪಸ್ಥಿತರಿದ್ದರು.

# ಚಿನ್ಮಯ ಸಾಂಸ್ಕೃತಿಕ ಅಕಾಡೆಮಿಯಿಂದ ಸತ್ಕರಿಸಿ ಆಹ್ವಾನ ಫಣೀಂದ್ರಾಚಾರ್ಯ ಅವರಿಗೆ 'ಚಿನ್ಮಯ ಕಲಾಶ್ರೀ' ಪ್ರಶಸ್ತಿ



ಗದಗ, : ಕಳೆದ 14 ವರ್ಷಗಳಿಂದ ಗದಗ ಜಿಲ್ಲೆಯ ಸಾಂಸ್ಕೃತಿಕ ವಲಯದಲ್ಲಿ ತನ್ನದೇ ಆದ ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ನಗರದ ಚಿನ್ಮಯ ಸಾಂಸ್ಕೃತಿಕ ಅಕಾಡೆಮಿಯು ಪ್ರತಿವರ್ಷ ವಿಶ್ವರಂಗಭೂಮಿ ದಿನಾಚರಣೆ ಆಚರಿಸುತ್ತ, ರಂಗಭೂಮಿ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾಗಿ ಹವ್ಯಾಸಿ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ಕಲಾವಿದರಿಗೆ ಪ್ರತಿವರ್ಷ 'ಚಿನ್ಮಯ ಕಲಾಶ್ರೀ' ಪ್ರಶಸ್ತಿ ನೀಡುತ್ತ ಬಂದಿದೆ. ಪ್ರಸಕ್ತ ಎಂಟನೇ ವರ್ಷದ ಪ್ರಶಸ್ತಿಗೆ ನಗರದ ಹಿರಿಯ ರಂಗ ಸಾಹಿತಿಗಳು ಹಾಗೂ ನಿರ್ದೇಶಕರಾದ ಫಣೀಂದ್ರಾಚಾರ್ಯ ದ್ಯಾಮೇನಹಳ್ಳಿ ಇವರನ್ನು ಆಯ್ಕೆ ಮಾಡಿದ್ದು, ರವಿವಾರ ಅವರ ನಿವಾಸದಲ್ಲಿ ಅವರನ್ನು ಸತ್ಕರಿಸುವ ಮೂಲಕ ಅಧಿಕೃತವಾಗಿ ಆಹ್ವಾನಿಸಲಾಯಿತು.

ಇದೇ ದಿನಾಂಕ 27 ರಂದು ಬುಧವಾರ ಸಂಜೆ 6 ಗಂಟೆಗೆ ನಗರದ ಕಬ್ಬಿಗರ ಕೂಟದ ಸಾಹಿತ್ಯ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರಿಸಲಾಗುವುದು ಎಂದು ಚಿನ್ಮಯ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷರಾದ ಮೌನೇಶ ಸಿ. ಬಡಿಗೇರ(ನರೇಗಲ್ಲ) ತಿಳಿಸಿದರು.ಈ ಸಂದರ್ಭದಲ್ಲಿ ಚಿನ್ಮಯ ಸಾಂಸ್ಕೃತಿಕ ಅಕಾಡೆಮಿಯ ಗೌರವ ಅಧ್ಯಕ್ಷರಾದ ಪ್ರೊ. ಎಮ್. ಎಸ್. ಕುಲಕರ್ಣಿ, ಹಿರಿಯ ಸಾಹಿಗಳಾದ ಅಂದಾನೆಪ್ಪ ವಿಭೂತಿ, ಅಕಾಡೆಮಿ ಗೌರವ ಸಲೆಹೆಗಾರರಾದ ಡಾ. ದತ್ತಪ್ರಸನ್ನ ಲ. ಪಾಟೀಲ, ಶ್ರೀಗುರು ರಾಘವೇಂದ್ರ ಸೇವಾ ಸಮೀತಿಯ ವಾದಿರಾಜ ಸೊರಟೂರ, ಶ್ರೀಧರ ಕುಲಕರ್ಣಿ, ಕೇಶವ ಜಹಗಿರದಾರ, ವಿಠ್ಠಲರಾವ್ ದೇಶಪಾಂಡೆ, ಬೊಮ್ಮಣಗಿ, ಕಲಾವಿದರಾದ ವಿಶ್ವನಾಥ ಬೇಂದ್ರೆ, ಉಜ್ವಲ್ ಕಬಾಡಿ, ಅಮರೇಶ ರಾಮಪೂರ ಸೇರಿದಂತೆ ಶ್ರೀರಾಘವೇಂದ್ರ ಕಲಾ ಬಳಗದ ಕಲಾವಿದರು ಹಾಗೂ ಚಿನ್ಮಯ ಸಾಂಸ್ಕೃತಿಕ ಅಕಾಡೆಮಿಯ ಸದಸ್ಯರು ಹಾಜರಿದ್ದರು.

# ಸಂಸದ ಅನಂತಕುಮಾರ ಹೆಗಡೆ ಗಡಿಪಾರಿಗೆ ಆಗ್ರಹ

ಕುಕನೂರು: ಸಂಸದ ಅನಂತಕುಮಾರ ಹೆಗಡೆ ಅವರನ್ನು ರಾಜ್ಯದಿಂದ ಗಡಿಪಾರು ಮಾಡಬೇಕೆಂದು ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಸಮಿತಿಯಿಂದ ಗ್ರೇಡ್-2 ತಹಶೀಲ್ದಾರ್ ಮುರುಳಿಧರ್ ಕುಲಕರ್ಣಿ ಅವರಿಗೆ ವಿಗೆ ಮಂಗಳವಾರ ಮನವಿ ಸಲ್ಲಿಸಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಆಗಮಿಸಿದ ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಸಮಿತಿಯ ಕಲಬುರ್ಗಿ ವಿಭಾಗೀಯ ಉಪಾಧ್ಯಕ್ಷ ಬಸವರಾಜ ನಡುವಲಮನಿ ಮಾತನಾಡಿ, ರಾಜ್ಯದ ಬಿಜೆಪಿ ಪಕ್ಷದ ಸಂಸದ ಅನಂತಕುಮಾರ ಹೆಗಡೆ ಅವರು ಪದೆ ಪದೇ ಸಂವಿಧಾನವನ್ನು ನಾವು ಬದಲಾಯಿಸುತ್ತೇವೆ ಎಂದು ಹೇಳಿಕೆ ನೀಡುತ್ತಾ ಬಂದಿದ್ದಾರೆ. ಆದರೆ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರವಾಗಲಿ ಅವರ ವಿರುದ್ಧ ಏನು ಕ್ರಮ ಕೈಗೊಂಡಿಲ್ಲ ಮತ್ತೆ ಸಂವಿಧಾನ ಕುರಿತು ತಮ್ಮ ಹೇಳಿಕೆಯನ್ನು ಪುರ್ನರುಚ್ಚರಿಸಿದ್ದಾರೆ. ಸಂವಿಧಾನ ವಿರೋಧ ಹೇಳಿಕೆಯಾಗಿದ್ದು ಅನಂತಕುಮಾರ ಹೆಗಡೆ ಅವರನ್ನು ರಾಜ್ಯದಿಂದ ಗಡಿಪಾರು ಮಾಡಬೇಕು. ಕಾನೂನಿನ ಅಡಿಯಲ್ಲಿ ಕಠೋರವಾದ ಶಿಕ್ಷೆಯನ್ನು ಕೊಡಬೇಕು ಎಂದು ಒತ್ತಾಯಿಸಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬಸವರಾಜ ನಡುವಲಮನಿ, ಶಿವಪ್ಪ ಭಂಡಾರಿ, ವೆಂಕಟೇಶ ಬಳ್ಳಾರಿ, ರವಿ ಹಿರೇಮನಿ, ಶರಣಪ್ಪ ಹಿರೇಮನಿ, ಹನಮಂತಪ್ಪ ಕಡೇಮನಿ, ಅಂದಪ್ಪ ಭಂಡಾರಿ, ಲೋಹಿತ್ ಹಿರೇಮನಿ ಸೇರಿದಂತೆ ಇತರರು ಇದ್ದರು.



ಕುಕನೂರು ಪಟ್ಟಣದಲ್ಲಿ ಸಂಸದ ಅನಂತಕುಮಾರ ಹೆಗಡೆ ಅವರನ್ನು ರಾಜ್ಯದಿಂದ ಗಡಿಪಾರು ಮಾಡಬೇಕೆಂದು ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಸಮಿತಿಯಿಂದ ಗ್ರೇಡ್-2 ತಹಶೀಲ್ದಾರ್ ಮುರುಳಿಧರ್ ಕುಲಕರ್ಣಿ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು.